ಅವನ ಅಭಿಪ್ರಾಯ.

ಜೇಕೆ ಸರ್ ಆಟೊ ಪ್ರಸಂಗಕ್ಕೆ, ''ಅದೇನು ಮಹಾ ಬಿಡೋ, ಸಚಿನ್ ತೆಂಡುಲ್ಕರ್ ರಸ್ತೆ ಬದಿಯಲ್ಲಿ ಮಕ್ಕಳ ಜೊತೆ ಕ್ರಿಕೆಟ್ ಆಡ್ತಾನೆ ಗೊತ್ತಾ?'' ಎನ್ನುತ್ತ ಉದಾಸೀನ ತೋರುತ್ತಿದ್ದ.

ಅಲ್ಲಿಗೇ ನಿಲ್ಲಿಸದ ಶಿವು, ''ಅಷ್ಟೇ ಅಲ್ಲಾ ಸಾರ್, ಯಾವುದಾದರೂ ಬೇರೆ ಊರಿಗೆ ಹೋದಾಗ, ರಸ್ತೆ ಬದಿಯ ಗೂಡಂಗಡಿಯಲ್ಲೂ ಚಾ ಕುಡೀತಾರೆ ಸಾರ್'' ಎನ್ನುತ್ತಿದ್ದ. ಇನ್ನೂ ಮುಂದುವರಿದು, ''ಹೈವೇಲಿ ಅರ್ಜಂಟಾದರೆ, ನಡುವೆಯೇ ನಿಲ್ಲಿಸಿ ಯಾವುದಾದರೂ ಮರದ ಹಿಂದೆ ರೀಸಸ್ ಕೂಡಾ ಮಾಡ್ತಾರೆ'' ಎನ್ನುವ ಗುಟ್ಟನ್ನೂ ಹೇಳುತ್ತಿದ್ದ.

ಗೂಡಂಗಡಿಯಲ್ಲಿ ಚಾ ಕುಡೀತಾರೆ ಅನ್ನುವಾಗ ಇರುವ ಹೆಮ್ಮೆ ಇದನ್ನು ಹೇಳುವಾಗ ಇಲ್ಲದಿದ್ದರೂ, ಜೇಕೆ ಸರ್ ತುಂಬಾ ಸಿಂಪಲ್ಲು ಎನ್ನುವುದನ್ನು ಸಾಬೀತು ಮಾಡಲು ಇಂಥಾ ರಹಸ್ಯಗಳನ್ನೂ ಹೇಳುವ ಅನಿವಾರ್ಯತೆ ಆತನಿಗಿರುತ್ತಿತ್ತು. 'ಉಚ್ಚೆ ಹೊಯ್ಯುವುದೇನು ಮಹಾ ಬಿಡು. ನಿನ್ನ ಜೇಕೆ ಸರ್ ಪ್ಯಾಂಟಿನ ಕಿಸೆಯೊಳಗೆ ಕೈ ಹಾಕಿ ಅಲ್ಲಿಂದಲೇ ತೊಡೆ ಸಂದಿ ತುರಿಸಿಕೊಳ್ಳುವುದನ್ನು ನಾನೇ ಎಷ್ಟೋ ಸಾರಿ ನೋಡಿದ್ದೇನೆ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯೋ ಥೇರಿ ಅವರದು' ಅಂತಾ ಹೇಳಿಬಿಡೋಣ ಎಂದು ಅರವಿಂದನಿಗೆ ಅನ್ನಿಸಿದರೂ ಇಂಥವುಗಳನ್ನೆಲ್ಲಾ ಶಿವುವಿನ ಮುಂದೆ ಹೇಳಲಾರದೇ ಸುಮ್ಮನಿರುತ್ತಿದ್ದ.

★★★

ಶಿವುಗೆ ತನ್ನ ಹೆಸರ ಹಿಂದೆ 'ಸಮಾಧಿ' ಸೇರಿಕೊಂಡಿದ್ದು ಅಷ್ಟೊಂದು ಇಷ್ಟವಿರಲಿಲ್ಲವೆಂದೇ ಕಾಣುತ್ತದೆ. ಅದನ್ನು ತೆಗೆದು ಹಾಕಲು ಆತ ಪ್ರಯತ್ನ ಪಟ್ಟಿದ್ದೂ ಇದೆ. ವಾಟ್ಸ್‌ಆ್ಯಪ್ ಸ್ಟೇಟಸ್ಸನ್ನು 'ಶಿವಾ' ಎಂದಾಗಿಸಿಕೊಂಡ. ಫೇಸ್‌ಬುಕ್‌ನಲ್ಲಿಯ ಪೂರ್ಣ ಹೆಸರೂ ಮೊಟಕಾಯಿತು. ಹಾಗೇ, ಬೈಕಿನ ಮೇಲೆ 'ಶಿವ್' ಎಂದು ಬರೆಸಿಕೊಂಡರೂ, ಅದೇ ಹೆಸರಿನ ಹಚ್ಚೆಯನ್ನು ಕೈಮೇಲೆ ಹಾಕಿಸಿಕೊಂಡರೂ; ಆನಂತರದ ಘಟನೆಯೊಂದು ಅವನ ಹೆಸರಿನೊಂದಿಗೆ 'ಸಮಾಧಿ' ಕಾಯಂ ಆಗಿ ಅಂಟುವಂತೆ ಮಾಡಿತು.

ಈ ಬಾರಿ ಜೇಕೆ ಕಂಪನಿ ನಗರದ ಮುಖ್ಯ ಭಾಗವೇ ಆಗಿದ್ದ ದೊಮ್ಮಲೂರಿನಲ್ಲಿ ಜಾಗ ಖರೀದಿಸಿತು. ದೊನ್ನೆಚಂದ್ರು ಅನ್ನುವ ವ್ಯಕ್ತಿಯ ಆಸ್ತಿ ಅದು. ಮಾರುವಾಗ ಆತ ಷರತ್ತೊಂದನ್ನು ವಿಧಿಸಿದ್ದ. ಆತನ ತಂದೆ ನಾರಾಯಣಪ್ಪನ ಸಮಾಧಿ ಮಾರುತ್ತಿರುವ ಜಾಗದಲ್ಲಿ ಇರುವುದಾಗಿಯೂ, ಅದನ್ನು ಹಾಗೇ ಇಟ್ಟುಕೊಳ್ಳಬೇಕೆಂದೂ, ಏನೇ ಕಟ್ಟಿದರೂ ಸಮಾಧಿಗೆ ಭಂಗವಾಗಕೂಡದೆಂದೂ, ಅಲ್ಲದೇ ಪ್ರತೀ ವರ್ಷ ತಂದೆಯ ತಿಥಿಯ ದಿನ ಅವರೆಲ್ಲರೂ ಕುಟುಂಬ ಸಮೇತ ಬಂದು ಸಮಾಧಿಯಲ್ಲಿ ಪೂಜೆ ಸಲ್ಲಿಸಿ ಹೋಗಲು ಅವಕಾಶ ಮಾಡಿಕೊಡಬೇಕೆಂದು ಆತ ತಾಕೀತು ಮಾಡಿದ್ದ. ಬೆಂಗಳೂರಿನ ಅಂಥಾ ಆಯಕಟ್ಟಿನ ಪ್ರದೇಶದಲ್ಲಿ ಅಷ್ಟು ದೊಡ್ಡ ಜಾಗ ಮಾರಾಟಕ್ಕೆ ಸಿಗುವುದೇ ಕಷ್ಟವಿತ್ತು. ಹಲವು ವರ್ಷಗಳಿಂದ ಹೊಂಚು ಹಾಕಿ ಕಾದು ಕುಳಿತು ದೊನ್ನೆಚಂದ್ರುವನ್ನು ಮಾರಲು ಒಪ್ಪಿಸಿಯಾಗಿತ್ತು. ಹೀಗಾಗಿ ಈ ಸಣ್ಣ ವಿಷಯಕ್ಕೆ ಜಮೀನು ಬಿಡುವ ಪ್ರಶ್ನೆಯೇ ಇರಲಿಲ್ಲ. ಅಲ್ಲದೇ ನಾರಾಯಣಪ್ಪನ ಸಮಾಧಿ ಕೂಡಾ ಜಮೀನಿನ ಒಂದು ಬದಿಯಲ್ಲಿ ಇತ್ತಾದ್ದರಿಂದ, ಶರತ್ತಿಗೆ ಒಪ್ಪಿಕೊಂಡಿದ್ದರು ಜೇಕೆ. ದೊನ್ನೆಚಂದ್ರು ಕರಾರು ಪತ್ರದಲ್ಲಿ ಕೂಡಾ ಈ ವಿಷಯ ಪ್ರಸ್ತಾಪಿಸಿ ಸಹಿ ಹಾಕಿಸಿಕೊಂಡಿದ್ದ.

ಆ ಜಮೀನಿನಲ್ಲಿ ಕಟ್ಟಬೇಕಾದ ಕಟ್ಟಡದ ನೀಲನಕ್ಷೆ ಸಿದ್ಧವಾಗುತ್ತಿರುವಂತೆ, ನಾರಾಯಣಪ್ಪನ ಸಮಾಧಿ ಮಾಸ್ಟರ್‌ಪ್ಲಾನಿನ ಬಹುಮುಖ್ಯ ಜಾಗದಲ್ಲೇ ಬರುತ್ತಿತ್ತು. ಅದು ಒಂದು ಬದಿಗಿದೆ ಅಂದುಕೊಂಡಿದ್ದರೂ, ಪ್ಲಾನ್ ತಯಾರಾದಮೇಲೇ ಅದರಿಂದಾಗುವ ತೊಂದರೆ ಗೊತ್ತಾದದ್ದು. ಸಮಾಧಿಯನ್ನು ಇದ್ದಲ್ಲೇ ಇಟ್ಟುಕೊಂಡು ನಕ್ಷೆ ಬದಲಿಸಲು ಪ್ರಯತ್ನಿಸಿದರಾದರೂ, ಪ್ಲಾನು